**<u>ಸರ್ವ ಧರ್ಮ ಸಮ್ಮೇಳನ</u>**

## "ಸಾರ್ವಭೌಮ ಮಾನವ ಧರ್ಮ" ದ ಪ್ರತಿಪಾದನೆ

"ಮಾನವ ಜಾತಿ ಒಂದು, ಮಾನವ ಧರ್ಮ ಒಂದು" – ಮಧ್ಯಸ್ಥ ದರ್ಶನ ಸಹ-ಅಸ್ತಿತ್ವವಾದದ ಪ್ರಕಾಶದಲ್ಲಿ

ಪ್ರತಿಪಾದಕ ಏವಂ ಲೇಖಕ – ಎ. ನಾಗರಾಜ್, ಅಮರ್ಕಂಟಕ್, ಛತಿಸ್ಗಢ್

| | |
|---|---|
| **ಸ್ಥಳ:** ಮಾನವ ಮಂದಿರ, ಗ್ರಾಮ ಕರೌಲಿ, ಕಾನ್ಪುರ್, ಉತ್ತರ್ ಪ್ರದೇಶ್. | **ದಿನಾಂಕ:** ಸೋಮವಾರ, ೨೩ ಏಪ್ರಿಲ್ ೨೦೧೨ |
| **ಹೆಚ್ಚು ಮಾಹಿತಿಗೆ:** ಸಮ್ಮೇಲನ ವೆಬ್ ಸೈಟ್: (ಆಂಗ್ಲ ಭಾಷೆಯಲ್ಲಿ ): www.mdarshan.info | **ಮಧ್ಯಸ್ಥ ದರ್ಶನ ವೆಬ್ ಸೈಟ್:** [ಆಂಗ್ಲ ಭಾಷೆಯಲ್ಲಿ] www.madhyasth-darshan.info |

**<u>ಉದ್ದೇಶ:</u>**

"ಸಾರ್ವಭೌಮ ಮಾನವ ಧರ್ಮ" ದ ಅನುಸಂಧಾನದ ಲೋಕವ್ಯಾಪೀಕರಣ, ಇದರಿಂದ ಅಖಂಡ ಮಾನವ ಸಮಾಜ, ಸಾರ್ವಭೌಮ ವ್ಯವಸ್ಥೆಯ ಸ್ಥಾಪನೆ. ಇದರ ಆಧಾರ 'ಮಧ್ಯಸ್ಥ ದರ್ಶನ ಸಹ-ಅಸ್ತಿತ್ವ ವಾದ'.

**<u>ಅವಧಾರಣ:</u>**

ಅನಾದಿ ಕಾಲದಿಂದ ಮಾನವ ಶಾಂತಿ, ಸಾಮರಸ್ಯತೆ ಹಾಗೂ ಶುಭವನ್ನು ಅಪೇಕ್ಷಿಸಿದ್ದಾನೆ. ಈ ದಿಶೆಯಲ್ಲಿ ಹಲವಾರು ಪ್ರಯತ್ನ ಮಾಡಲಾಗಿದೆ ಆದರೆ ಸಂತೋಷಜನಕ ಪರಿಣಾಮ ಪಡೆದಿಲ್ಲ. ಈ ಪ್ರಯತ್ನಗಳಲ್ಲಿ ವಿಭಿನ್ನತೆ ನೋಡಲಾಗಿದೆ. ಮಾನವನ ವಿಕಾಸ ಸ್ವಯಂಮ್ನಿನ ತಿಳುವಳಿಕೆ ಹಾಗೂ ಅಸ್ತಿತ್ವದ (ವಾಸ್ತವಿಕತೆಯ) ತಿಳುವಳಿಕೆಯ ಮೇಲೆ ನಿರ್ಬಂಧಿತವಾಗಿದೆ. ಕಲ್ಲು, ಮಣ್ಣು, ಗಿಡ, ಮರ, ಜೀವಜಂತು, ಇವೆಲ್ಲರ ಬಗ್ಗೆ ಏಕ-ಮತ ಹೊಂದಿರಬಹುದು, ಆದರೆ ಮಾನವನ ಸಂದರ್ಭದಲ್ಲಿ ಹೇಗೆ, ಯಾಕೆ, ಇದರ ಮೇಲೆ ಏಕ-ಮತ, ಸಾರ್ವಭೌಮಿಕತೆ ಪಡೆಯುವುದು ಇನ್ನೂ ಪ್ರತೀಕ್ಷಿತವಾಗಿದೆ.

ಅಸ್ತಿತ್ವವೇ (ವಾಸ್ತವಿಕತೆ) ಸಹ-ಅಸ್ತಿತ್ವ, ಶೂನ್ಯದಲ್ಲಿ (ಸ್ಪೇಸ್) ಸಂಪ್ರುಕ್ತ ಇಕಾಈಗಳ ರೂಪದಲ್ಲಿದೆ. ಈ ಇಕಾಈಗಳು ನಾಲಕ್ಕು ಅವಸ್ಥೆಯ ರೂಪದಲ್ಲಿ ಪ್ರತ್ಯಕ್ಷವಾಗಿದೆ: ಇದು ಪದಾರ್ಥ, ಪ್ರಾಣ, ಜೀವ ಮತ್ತು ಮಾನವನ ರೂಪದಲ್ಲಿದೇ. ಪ್ರತಿ ಇಕಾಈಯು ಸ್ವಯಂ ವ್ಯವಸ್ಥೆಯಲ್ಲಿದ್ದು ಸಮಗ್ರ ವ್ಯವಸ್ಥೆಯಲ್ಲಿ ಭಾಗಿದಾರಿಯಾಗಿದೆ ಅಥವಾ ಸಾಮರಸ್ಯತೆಯಲ್ಲಿದೆ. ಮಾನವನೂ ವ್ಯವಸ್ಥೆಯಲ್ಲಿರಲು ಅಪೇಕ್ಷಿಸುತ್ತಾನೆ. ಇದು ಜ್ಞಾನದಿಂದಲೇ ಸಂಭವ. ಈ ಜ್ಞಾನ, ಅಮರ್ಕಂಟಕ ನಿವಾಸಿ ಶ್ರೀ ಎ. ನಾಗರಾಜರವರ (೯೨ ಆಯು) ೨೫ ವರ್ಷದ ಸಾಧನೆ (ಸಮಾಧಿ, ಸಂಯಮ ವಿಧಿ) ಮತ್ತು ಅನುಸಂಧಾನದಿಂದ ಸ್ಪಷ್ಟವಾಗಿದೆ.

ಮಾನವ ಚೈತನ್ಯ ಇಕಾಈ (ಜೀವನ) ಏವಂ ಶರೀರದ (ಜಡ ವಸ್ತು, ಭೌತಿಕ-ರಾಸಾಯನಿಕ ವಸ್ತು) ಸಂಯುಕ್ತ ರೂಪದಲ್ಲಿ ಅರಿವಾಗಿದೆ. ಮಾನವನ ಮೂಲ ಇಚ್ಛೆ: ಸುಖವಾಗಿರಲು, ಇದು ಸಮಾಧಾನದಿಂದಲೇ ಸಂಭವ, ಅರಿವು, ಜ್ಞಾನದಿಂದಲೇ ಸಂಭವ. ಮಾನವನ ಸಮಸ್ತ ಸಮಸ್ಯೆ ಜ್ಞಾನ, ಸಮಾಧಾನದ ಅಭಾವದಿಂದಲೇ. ಈ ದರ್ಶನದಲ್ಲಿ ಪ್ರಸ್ತುತ ಜ್ಞಾನ ನಿರಪೇಕ್ಷವಾಗಿದ್ದು, ಪ್ರತ್ಯೇಕ ಮನುಷ್ಯನಿಗೆ ಸಮಾನವಾಗಿದ್ದು, ನಿಶ್ಚಿತವಾಗಿದ್ದು, ಸಾರ್ವಭೌಮವಾಗಿದೆ. ಇದರ ಆಧಾರದ ಮೇಲೆ ಸಾರ್ವಭೌಮ ಮಾನವಿಯ ಆಚರಣೆ ಏವಂ ಸಾರ್ವಭೌಮ ಮಾನವಿಯ ಮೌಲ್ಯ ಸ್ಪಷ್ಟವಾಗುತ್ತದೆ, ಇದರಿಂದ ಅಖಂಡ ಸಮಾಜ-ಸಾರ್ವಭೌಮ ವ್ಯವಸ್ಥೆಯ ಸಂಭಾವನೆ ಉದಯವಾಗುತ್ತದೆ. ಸಂಕ್ಷಿಪ್ತದಲ್ಲಿ, ಈ ದರ್ಶನದಲ್ಲಿ ಮಾನವನ ಸಂಪೂರ್ಣ ಜಿಜ್ಞಾಸಗಳ ಉತ್ತರವಿದ್ದು, ಪ್ರತ್ಯೇಕ ಸಮಸ್ಯೆಗೆ ಸಮಾಧಾನವು ಉಪಲಬ್ಧವಿದೆ.

ಈ ದರ್ಶನವನ್ನು ಶಿಕ್ಷಣ ವಿಧಿಯಲ್ಲಿ ಅನುಗೊಳಿಸುವ ಸ್ವರೂಪ ಸುಲಭವಾಗಿದೆ ಹಾಗು ಭಾರತದಲ್ಲಿ ಈಗಾಗಲೇ ೧೪ ವರ್ಷಗಳಲ್ಲಿ ಬಹುಮಟ್ಟಿಗೆ ೩೦,೦೦೦ ಜನಸಾಮಾನ್ಯ ಈ ದರ್ಶನದ ಪರಿಚಯ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಮೇಧಾವಿಗಳು ಈ ದರ್ಶನದ ಅಧ್ಯಯನದಲ್ಲಿ ನಿರತರಾಗಿದ್ದಾರೆ. ದರ್ಶನದ ಮೇಲೆ ಆಧಾರಿತ ಮೌಲ್ಯ- ಶಿಕ್ಷಣ ಚತ್ತೀಸ್ಗಡ ರಾಜ್ಯದ ಪ್ರೌಢಶಾಲೆ ಶಿಕ್ಷಣ ವಿಭಾಗ, ಉಚ್ಚಕೋಟಿ-ಶಿಕ್ಷಣ ಸಂಸ್ಥೆಗಳು ಹಾಗು ವಿಶ್ವವಿಧ್ಯಾಲಯಗಳಲ್ಲಿ ಆರಂಭಿಸಲಾಗಿದೆ. ಶ್ರೀ ನಾಗರಾಜನವರನ್ನು ಹಲವಾರು ಪ್ರಸಿದ್ಧ ವೈಜ್ಞಾನಿಕರು, ಭಾರತದ ಪೂರ್ವ ರಾಷ್ಟ್ರಪತಿ, ಸುಪ್ರೀಮ್ ಕೋರ್ಟಿನ ಮುಖ್ಯ ನ್ಯಾಯಾಧೀಶ , ರಾಜ್ಯ ಮುಖ್ಯ-ಮಂತ್ರಿ, ಧರ್ಮ ಗುರು, ಸಾಮಾಜಿಕ ಕಾರ್ಯಕರ್ತ, ಶಿಕ್ಷಣ ತಜ್ಞರು ಹಾಗೂ ಜನಸಾಮಾನ್ಯರೂ ಬೇಟಿಯಾಗಿದ್ದಾರೆ, ಈ ಪ್ರಸ್ತಾಪವನ್ನು ಕೇಳಿದ್ದಾರೆ, ಕೆಲವರು ಇದರ ಅಧ್ಯಯನದಲ್ಲಿ ನಿರತರಾಗಿದ್ದಾರೆ.

ಮಧ್ಯಸ್ಥ ದರ್ಶನದ ಈ ಪ್ರಸ್ತಾಪದಲ್ಲಿ ಪ್ರತಿಪಾದನೆ ಮಾಡಲಾಗಿದೆ – ಮಾನವ ಜಾತಿ ಒಂದು, ಮಾನವ ಧರ್ಮ ಒಂದು. ಮಾನವ ಧರ್ಮ = ಸಮಾಧಾನ = ಅರಿವು. ಅಸ್ತಿತ್ವದಲ್ಲಿ ವ್ಯವಸ್ಥೆಯನ್ನು ಅರಿತುಕೊಳ್ಳುವುದು, ನಾಲಕ್ಕು ಅವಸ್ಥೆಗಳಲ್ಲಿ (ಪದಾರ್ಥ, ಪ್ರಾಣ, ಜೀವ, ಮಾನವ) ವ್ಯವಸ್ಥೆಯನ್ನೂ ಅರಿತುಕೊಳ್ಳುವುದೇ ಮಾನವ ಧರ್ಮ. ಇದೆ 'ಸಮಾಧಾನ'. ಈ ಅನುಸಂಧಾನ ನಮ್ಮ (ಮಾನವನ) ಸಂಕೀರ್ಣ, ಸಾಮುದಾಯಿಕ ಮಾನಸಿಕತೆಯಿಂದ ಹೊರಬರಲು ಹಾಗು ಅಖಂಡತೆಯ ಮಾನಸಿಕತೆಯಿಂದ ಬಾಳಲು, ಒಂದು ಇಚ್ಛೆಯ ನವ ಕಿರಣ.

ಈ ಪ್ರಸ್ತಾಪವನ್ನು, ಎಲ್ಲಾ ಧರ್ಮದ ಮಾನವರು, ಹಾಗು ಯಾವುದೇ ಧರ್ಮಕ್ಕೆ ಸೇರಿದ್ದಲ್ಲಾ ಎಂದು ನಂಬುವ ಮಾನವರು, ತಮ್ಮ ಸದ-ವಿವೇಕದಿಂದ ಪರಾಮರ್ಶಿಸಲು ಹಾಗು ಸ್ವೇಚ್ಛೆಪೂರ್ವಕ ಉಪಸ್ಥಿತವಾಗಲು ಆಮಂತ್ರಣ.

**<u>ಸ್ವೇಚ್ಛೆಪೂರ್ವಕ ಉಪಸ್ಥಿತರಾಗುವರಿಗೆ ಆಮಂತ್ರಣ</u>**

[***ಧರ್ಮ = ಧಾರಣ** = 'ಯಾವುದು ಯಾವುದರಿಂದ ವಿಲಗೀಕರಣ ಸಂಭವವಿಲ್ಲವೋ, ಅದೇ ಅದರ ಧರ್ಮ' |' ಪದಾರ್ಥಾವಸ್ಥೆಯ ಧರ್ಮ= ಅಸ್ತಿತ್ವ, ಇರುವಿಕೆ. ಪ್ರಾಣಾವಸ್ಥೆಯ ಧರ್ಮ = ಪುಷ್ಟಿ. ಜೀವಾವಸ್ಥೆಯ ಧರ್ಮ = ಬಾಳುವ ಆಶಾ. ಮಾನವ ಧರ್ಮ = ಸುಖ = ಸಮಾಧಾನ.

***ಇಕಾಈ** = 'ಯುನಿಟ್'. ಕ್ರಿಯೆ ಇದ್ದರೆ ಅದು ಇಕಾಈ, ಶೂನ್ಯ-ಸ್ಪೇಸ್-ವ್ಯಾಪಕ = ಕ್ರಿಯೇಶೂನ್ಯ ]

**<u>ಕಾರ್ಯಕ್ರಮ:</u>**

**<u>ದಿನಾಂಕ :</u> ೨೩ ಏಪ್ರಿಲ್, ೨೦೧೨**


**<u>೯.೦೦ – ೧.೦೦ –</u> ಪ್ರಸ್ತಾಪ – ಮಧ್ಯಸ್ಥ ದರ್ಶನದ ಪ್ರಕಾಶದಲ್ಲಿ 'ಮಾನವ ಧರ್ಮ ಒಂದು, ಮಾನವ ಜಾತಿ ಒಂದು', ಇದರ ಪ್ರತಿಪಾದನೆ.**

**<u>೧.೦೦ – ೩.೦೦ –</u> ಭೋಜನ, ಅನೌಪಚಾರಿಕ ಚರ್ಚೆ**

**<u>೩.೦೦ – ೬.೦೦</u> : "ಮಾನವ ಧರ್ಮ ಒಂದು" ಇದರ ಮೇಲೆ ಅನ್ಯ ಪ್ರಸ್ತಾಪಗಳ ಆಮಂತ್ರಣ, ವಿಚಾರ ವಿಮರ್ಶೆ.**

***ಭೋಜನ ಹಾಗು ನಿವಾಸ ವ್ಯವಸ್ಥೆ ಮಾಡಲಾಗುತ್ತದೆ. <u>ಪ್ರಯಾಣದ ಕರ್ಚು ಭಾರಿಸಲಾಗುವುದಿಲ್ಲ.</u>*

**<u>ಸಮ್ಮೇಳಲನ ಸ್ಥಳ ತಲಪಲು ನಕ್ಷೆ:</u>**



**ಸಂಪರ್ಕ -**

ಕೃಪೆ ಮಾಡಿ ತಮ್ಮ ಆಗಮನದ ಪೂರ್ವ ಸೂಚನೆ ನೀಡಿರಿ:

**ಈಮೈಲ್:** manavmandir@mail.com

**ಫೋನ್:** ಪ್ರದೀಪ್**:** 9793919149, 9335373447 | ಗೋಪಾಲ್: 9451522231, 9335111631 | विवेक ಚತುರ್ವೇದಿ:9839039997 | ಸಂತೋಷ್ ಭದೋರಿಯ: 9695223379

***ಶ್ರೀ ಎ. ನಾಗರಾಜರವರ ಲೇಖ:***

## ಮಾನವ ಜಾತಿ, ಮಾನವ ಧರ್ಮ

ಮಾನವ ಧರ್ಮದ ಸಂದರ್ಭದಲ್ಲಿ, ಮೂರು ಆಶಯ ಒಳಗೊಂಡಿದೆ, ವಿಕಸಿತ ಚೇತನದಲ್ಲಿ ಬಾಳುವ ಮಾನವ, ದೇವ ಮಾನವ, ದಿವ್ಯ ಮಾನವನ ಅಧ್ಯಯನ. ಚೇತನದ ಸಂದರ್ಭದಲ್ಲಿ ನಾಲಕ್ಕು ಭಾಗದ ಅಧ್ಯಯನ: ಜೀವ ಚೇತನ, ಮಾನವ ಚೇತನ, ದೇವ ಚೇತನ, ದಿವ್ಯ ಚೇತನ. ಜೀವ ಚೇತನ ವಿಧಿಯಿಂದ ಸಂಪೂರ್ಣ ಅಪರಾಧವನ್ನು ಮಾಡುತ್ತಾ ಮಾನವನ್ನನ್ನು ನೋಡಲಾಗಿದೆ, ಇದರ ಸಾಕ್ಷಿ ಶಿಕ್ಷೆಯಲ್ಲಿ ಲಬೋನ್ಮಾದ, ಕಾಮೋನ್ಮಾದ, ಭೋಗೋನ್ಮಾದೀ ಶಿಕ್ಷಾ. ಪ್ರತಿಯೊಬ್ಬ ಅಭಿಭಾವಕ (ಮಾತಾ, ಪಿತ) ತನ್ನ ಸಂತಾನವನ್ನು ಸುಶೀಲ ವ್ಯಕ್ತಿಯಾಗಿ ನೋಡಲು ಆಶಿಸುತ್ತಾನೆ, ಪ್ರತಿ ದೇಶ, ಕಾಲದಲ್ಲಿ. ಪೂರ್ವೋಕ್ತ ಪ್ರಕಾರದ ಮೂರು ಉನ್ಮಾದದ ಶಿಕ್ಷೆ ಪಡೆಯುತ್ತಾ ಸುಶೀಲವಾಗುವುದು ಎಷ್ಟು ಸಂಭವ, ಇದನ್ನು ಪ್ರತಿಯೊಬ್ಬ ಅಭಿಭಾವಕ ಯೋಚಿಸಬಹುದು. ವಿಕಸಿತ ಚೇತನದ ಪ್ರಮಾಣದಲ್ಲಿ, ಆಚರಣೆಯಲ್ಲಿ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ ಸಹಜ ಪ್ರಮಾಣ ಕಂಡುಬರುತ್ತದೆ. ಇದು ಸಹ-ಅಸ್ತಿತ್ವದಲ್ಲಿ ಅನುಭವದ ಪ್ರಮಾಣ. ಸಹ-ಅಸ್ತಿತ್ವ ('ಅಸ್ತಿತ್ವ' ಯಾವುದೆಲ್ಲಾ ಇದೆಯೋ) ಅಧ್ಯಯನಗಮ್ಯವಾಗಲಾಗಿದೆ. ಸಹ-ಅಸ್ತಿತ್ವದಲ್ಲಿ ಅನುಭವ ಮೂಲಕ ವಿಧಿಯಿಂದ ಆಲೋಚಿಸುವ ವಿಚಾರಗಳ ಪ್ರಮಾಣ, ನಿಯಮ-ನಿಯಂತ್ರಣ-ಸಂತುಲನ, ನ್ಯಾಯ-ಧರ್ಮ-ಸತ್ಯದ ರೂಪದಲ್ಲಿ ವ್ಯವಹಾರದಲ್ಲಿ ಪ್ರಮಾಣಿತವಾಗುತ್ತದೆ.

ಅನುಭವ ಮೂಲಕ ವಿಚಾರ ಶೈಲಿ ಸಮ್ಮತ ವ್ಯವಹಾರದಲ್ಲಿ ಸ್ವ-ಧನ, ಸ್ವ-ನಾರಿ/ಸ್ವ-ಪುರುಷ, ದಯಾಪೂರ್ಣ ಕಾರ್ಯ ವ್ಯವಹಾರದ ರೂಪದಲ್ಲಿ ಪ್ರಮಾಣಿತವಾಗುತ್ತದೆ. ಇದನ್ನು ಬಾಳಿ, ಪ್ರಮಾಣಿಸಿ ನೋಡಲಾಗಿದೆ. ಇದರ ಪ್ರಯೋಜನ, ಅಖಂಡ ಸಮಾಜ – ಸಾರ್ವಭೌಮ ವ್ಯವಸ್ಥೆ. ಇದಕ್ಕೆ ಪೂರ್ವೋಕ್ತ ಆಚರಣೆ ವಿಧಿಯಿಂದ ವರ್ತಮಾನದಲ್ಲಿ ವಿಶ್ವಾಸವಾಗುತ್ತದೆ, ಫಲಸ್ವರೂಪ ಅಖಂಡ ಸಮಾಜ ಪ್ರತಿಷ್ಠಿತವಾಗುತ್ತದೆ. ಅಖಂಡ ಸಮಾಜ ವ್ಯವಸ್ಥೆಯೇ '೧೦ ಸೋಪಾನೀಯ ವಿಧಿ', ಇದರಿಂದ ಪರಿವಾರ ಸಭೆ ಮೂಲಕ ವ್ಯವಸ್ಥಿತವಾಗುತ್ತದೆ. ಇದೇ ಸಾರ್ವಭೌಮ ವ್ಯವಸ್ಥೆ. ಇದೇ ವಿಕಸಿತ ಚೇತನದ ಫಲ, ಪರಿಣಾಮ. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಭಾಗಿದಾರಿಯಾಗುತ್ತದೆ.

- ವ್ಯಕ್ತಿಯಲ್ಲಿ ಸಮಾಧಾನ
- ಪರಿವಾರದಲ್ಲಿ ಸಮಾಧಾನ, ಸಮೃದ್ಧಿ
- ಸಮಾಜದಲ್ಲಿ ಅಖಂಡತೆ
- ವ್ಯವಸ್ಥೆಯಲ್ಲಿ ಭಾಗಿದಾರಿ

ಸಹಜ ಪ್ರಮಾಣವೇ ಭ್ರಮೆ ಮುಕ್ತ, ಅಪರಾಧ ಮುಕ್ತ ಮಾನವನ ಸ್ವರೂಪ. ಈ ಪ್ರಕಾರದ ಮಾನವ ತಯಾರಾಗುವುದೇ, ಈ ಪ್ರಕಾರದ ನರ, ನಾರಿ ತಯಾರಾಗುವುದೇ ಅಪರಾದ-ಮುಕ್ತ, ಭ್ರಮೆ ಮುಕ್ತ ಮಾನವನ ಗುರುತು. ಮಾನವ ಜಾತಿ ಒಂದೇಯಾಗುವ ಮೂಲದಲ್ಲಿ ಕಪ್ಪು, ಕಂದು, ಬಿಳಿ ಹಾಗು ವಿಭಿನ್ನ ಪ್ರಕಾರಗಳ ಸಮೇತ ಕಂಡುಬರುವ ಮಾನವ ಜಾತಿಯಲ್ಲಿ, ರಕ್ತದ ಪ್ರಜಾತಿಯ ಸಮಾನತೆ, ಶರೀರದ ರಚನೆಯಲ್ಲಿ ಮೂಳೆಯ ಆಧಾರದ ಮೇಲೆ, ಅಂಗಗಳ ಆಧಾರದ ಮೇಲೆ, ಉಗುರು, ಹಲ್ಲಿನ ರಚನೆ ಖರವಾಗಿರುವ ಆಧಾರದ ಮೇಲೆ, ರಕ್ತದ ನಿಶ್ಚಿತ ಪ್ರಜಾತಿಯ ಆಧಾರದ ಮೇಲೆ ಹಾಗೂ ಕರುಳಿನ ಸಂದರ್ಭದಲ್ಲಿ-ಮಾಂಸಾಹಾರಿ ಜೀವಿಗಳ ಕರುಳು ಚಿಕ್ಕದಾಗಿದ್ದು, ಶಾಕಾಹಾರಿ ಜೀವಿಗಳ ಕರುಳು ಉದ್ದವಾಗಿರುತ್ತದೆ, ಇದೆಲ್ಲರ ಆಧಾರದ ಮೇಲೆ ಮಾನವ ಜಾತಿ ಒಂದು ಎಂದು ಅಧ್ಯಯನಗಮ್ಯವಾಗಿದೆ. ಮಾನವ ಸುಖಿ ಧರ್ಮಿ, ಸಮಾಧಾನವೇ ಮಾನವನ ಧರ್ಮ. ಸಮಾಧಾನ ಅರಿವಿನಿಂದಲೇ ಸಂಭವ, ಸಮಾಧಾನದಿಂದಲೇ ಮಾನವ ಸುಖವನ್ನು ಅನುಭವಿಸುತ್ತಾನೆ, ಇದೆ ಮಾನವನ ಧರ್ಮ. ಇದು ಅಧ್ಯಯನಗಮ್ಯವಾಗಿದೆ. ಛತ್ತೀಸ್ಗಡ ಶಾಲಾ ಶಿಕ್ಷಣ ವಿಭಾಗದ ಸದಸ್ಯರು ಇದನ್ನು ಅಧ್ಯಯನ ಮಾಡುತ್ತಿದ್ದಾರೆ.

ಈ ಪ್ರಕಾರ ಶರೀರ ರಚನೆಯ ಆಧಾರದ ಮೇಲೆ ಮಾನವ ಜಾತಿ ಒಂದು, ಹಾಗೂ ಸಮಾಧಾನದ (ಅರಿವಿನ) ಆಧಾರದ ಮೇಲೆ ಮಾನವ ಧರ್ಮ ಒಂದು (ಸುಖ). ಇದರ ಆಧಾರದ ಮೇಲೆ ಮಾನವ ಜಾತಿ ಒಂದು, ಮಾನವ ಧರ್ಮ ಒಂದು, ಇದರ ಪ್ರತಿಪಾದನೆ ೨೩ ಏಪ್ರಿಲ್ , ೨೦೧೨ ರಂದು ಮಾಡಲಾಗುತ್ತದೆ. ಮಾನವ ಜಾತಿ ಒಂದು, ಧರ್ಮ ಒಂದು, ಇದರ ಆಧಾರದ ಮೇಲೆ ಅಖಂಡ ಸಮಾಜ, ಸಾರ್ವಭೌಮ ವ್ಯವಸ್ಥೆಯ ಅರ್ಥದಲ್ಲಿ 'ಮಾನವ ಮಂದಿರ'ದ ಸ್ಥಾಪನೆ ಗ್ರಾಮ ಕರೌಲಿ, ಕಾನ್ಪುರ್, ಉತ್ತರ ಪ್ರದೇಶದಲ್ಲಿ ಆಗಿದೆ.

ಜಯವಾಗಲಿ, ಮಂಗಳವಾಗಲಿ, ಕಲ್ಯಾಣವಾಗಲಿ!

ಎ. ನಾಗರಾಜ್,

ಪ್ರತಿಪಾದಕ, ಮಧ್ಯಸ್ಥ ದರ್ಶನ – ಸಹ-ಅಸ್ತಿತ್ವವಾದ,

ಅಮರ್ಕಂಟಕ, ಜಿ. ಅನ್ನುಪುರ್, ಮ.ಪ್ರ., ಭಾರತ.